**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.1739/2016**

**ದಿನಾಂಕಃ 27.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಜಯಣ್ಣ | ಚಾಸಾ-2, ಪ್ರಾಸ.-1 |
| ತಂದೆಯ ಹೆಸರು | ಃ | ಸಿದ್ದಬಸಪ್ಪ | |
| ವಯಸ್ಸು | ಃ | 54 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸ | ಃ | ಬಿಸ್ಲೇಹಳ್ಳಿ | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿತರು ಗೊತ್ತು. ದಿಃ 08.05.2016 ರಂದು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ನಾನು ನನ್ನ ದೊಡ್ಡ ಅಣ್ಣನ ಮನೆಯಲ್ಲಿ ನಾನು ನನ್ನ ಕುಟುಂಬದೊಂದಿಗೆ ಇದ್ದೆ. ಸದರಿ ಮನೆಯ ಪಕ್ಕದಲ್ಲಿ ನನ್ನ ಮತ್ತೊಬ್ಬ ಅಣ್ಣನಾದ ಹಾಲಪ್ಪ ರವರ ಮನೆ ಇದೆ. ಸದರಿ ಮನೆಯಲ್ಲಿ ಚಾಸಾ-2 ರವರು ಇದ್ದರು ಆಗ 1 ನೇ ಆರೋಪಿ ಚಾಸಾ-2 ರವರಿಗೆ ಕಲ್ಲಿನಲ್ಲಿ ಹೊಡೆಯುತ್ತಿದ್ದರು. ಆಗ 2 ಮತ್ತು 3 ನೇ ಆರೋಪಿತರು ಬಂದು ಚಾಸಾ-2 ರವರಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಆಗ ಆರೋಪಿ 1, 4 ಮತ್ತು 5 ರವರು ಚಾಸಾ-2 ರವರಿಗೆ ಕೈಯಿಂದ ಹೊಡೆದಿರುತ್ತಾರೆ. ಕೊಲೆ ಮಾಡುತ್ತೇವೆ ಎಂದು ಚಾಸಾ-2 ರವರಿಗೆ ಬೆದರಿಕೆ ಹಾಕಿದರು. ಹೊಸ ಮನೆಯ ಗೃಹಪ್ರವೇಶ ಇದ್ದುದರಿಂದ ಎರಡು ದಿನಗಳ ನಂತರ ನಾನು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅಂದು ಚಾಸಾ-2 ರವರಿಗೆ ಹಲ್ಲೆ ಮಾಡಿದವರಲ್ಲಿ ಇಬ್ಬರು ಇದ್ದಾರೆ ಇನ್ನೂ 3 ಜನ ಗೈರುಹಜಾರು ಇರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಲ್ಲು ಮತ್ತು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಶ್ರೀ ಪಿ ಆರ್ ಸಿ ಆರೋಪಿ ಪರ ವಕೀಲರಿಂದಃ**

ನ್ಯಾಯಾಲಯದಲ್ಲಿ ವಕೀಲರು ಘಟನೆಯ ಬಗ್ಗೆ ಹೇಳಿದಾಗ ನನಗೆ ಮನವರಿಕೆಯಾಗಿ ಅದರ ಮೇಲೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ನನ್ನದೇ. ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ. ದಿನಾಂಕ 10 ರಂದು ದೂರು ನೀಡಿರುತ್ತೇನೆ. ಪೋಲಿಸರು ಹೇಳಿದಂತೆ ದೂರು ನೀಡಿದ್ದೇನೆ ಎಂದರೆ ಸರಿ. ಚಾಸಾ-2 ರವರು 2 ದಿನ ಆಸ್ಪತ್ರೆಯಲ್ಲಿದ್ದರು. ಆಸ್ಪತ್ರೆಯಲ್ಲಿ ಚಾಸಾ-2 ರವರು 2 ದಿನ ಇದ್ದಕಾರಣ ನಾನು ನಂತರ ಬಂದು ದೂರು ನೀಡಿದ್ದೇನೆ ಎಂದರೆ ಸರಿ. ಕಾನೂನಿನ ಬಗ್ಗೆ ತಿಳಿದು ಅದರ ಅಧಾರದ ಮೇರೆಗೆ ದೂರು ನೀಡಿದ್ದೇನೆ ಎಂದರೆ ಸರಿ. ಮುಮಾ-1 ಮತ್ತು 2 ನ್ನು ನಾವು ತೆಗೆದು ಇಟ್ಟಿದ್ದೆವು ಅದನ್ನು ಪೋಲಿಸರು ವಶಪಡಿಸಿಕೊಂಡರು ಎಂದರೆ ಸರಿ. 1 ನೇ ಆರೋಪಿಗೆ 70 ವರ್ಷವಯಸ್ಸಾಗಿರಬಹುದು. 1 ನೇ ಆರೋಪಿಯು ದಪ್ಪ ಇದ್ದಾರೆ ಎಂದರೆ ಸರಿ. 1 ನೇ ಆರೋಪಿಯು ಏನನ್ನೂ ಎತ್ತುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ 22 ರಲ್ಲಿ 1 ಎಕರೆ 25 ಗುಂಟೆ ಮೂಲತಃ 1 ನೇ ಆರೋಪಿಯ ಗಂಡನಿಗೆ ಸೇರಿದ್ದು ಎಂದರೆ ಸಾಕ್ಷಿಯು ಅವರಿಂದ ನಾವು ಕ್ರಯಕ್ಕೆ ಪಡೆದಿದ್ದೇವೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಕುಟುಂಬದವರಗೂ ಮತ್ತು ಊರಿನವರಿಗೂ ಸ್ವತ್ತಿನ ಮೇಲೆ ಬಹಳ ವರ್ಷಗಳಿಂದ ಘರ್ಷಣೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎರಡು ಮನೆಗಳು ಇತ್ತು ದೊಡ್ಡಣ್ಣನ ಮನೆ ಕೆಡವಿ ಹೊಸ ಮನೆ ನಿರ್ಮಿಸಲು ಹೊರಟಾಗ ಗಲಾಟೆಯಾಯಿತು ಎಂದು ನುಡಿಯುತ್ತಾರೆ. ಸರ್ವೆ ನಂ 32 ರಲ್ಲಿ ಯಾವುದೇ ಸ್ವತ್ತನ್ನು ಸರ್ಕಾರ ವಶಪಡಿಸಿಕೊಂಡಿರುವುದಿಲ್ಲ ಮತ್ತು ಫಲಾನುಭವಿಗಳಿಗೆ ಪರಿಹಾರ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ್ವತ್ತು ಅನ್ಯಕ್ರಾಂತವಾಗಿದೆ ಮತ್ತು ನಮಗೆ ಇ ಸ್ವತ್ತು ನೀಡಿದ್ದಾರೆ ಎಂದು ನುಡಿಯುತ್ತಾರೆ. ನಾವು ಸ್ವತ್ತಿನಲ್ಲಿ ಅನಧಿಕೃತವಾಗಿ ಸ್ವಾದೀನ ಇದ್ದೇವೆ ಎಂದು ಆರೋಪಿತರು ಘರ್ಷಣೆ ಮೊದಲಿನಿಂದಲೂ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 7-8 ವರ್ಷದಿಂದ ಆರೋಪಿತರು ಘರ್ಷಣೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ನಾನು ಸ್ವತ್ತಿನಲ್ಲಿ ಅನಧಿಕೃತವಾಗಿ ವಾಸ ಇದ್ದು ಅದನ್ನು ಆರೋಪಿತರು ಯಾವುದೇ ಕಾರಣಕ್ಕೂ ಪ್ರಶ್ನಿಸಬಾರದು ಎಂಬ ಕಾರಣಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ಹೊಡೆದಿದ್ದಾರೆ ಆಗ ನನಗೆ ಏನು ಮಾಡಬೇಕು ಎಂದು ನನಗೆ

ಗೊತ್ತಾಗಲಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ಏನು ಆಗಿದೆ ಎಂದು ವೈದ್ಯಕೀಯ ದಾಖಲೆ ನ್ಯಾಯಾಲಯಕ್ಕೆ ನೀಡಿರಬಹುದು. ಕ್ರಿಮಿನಲ್ ಪ್ರಕರಣ ದಾಖಲಿಸಲು ಗಾಯದ ಪ್ರಮಾಣ ಪತ್ರದ ಅವಶ್ಯಕತೆ ಇತ್ತು ಎಂದು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಾಸಾ-2 ರವರನ್ನು ಆಸ್ಪತ್ರೆಗೆ ದಾಖಲಿಸಿದ ಕಾರಣ ಪರೀಕ್ಷೆ ಮಾಡಿ ಗಾಯದ ಪ್ರಮಾಣಪತ್ರ ನೀಡಿದ್ದಾರೆ ಎಂದು ನುಡಿಯುತ್ತಾರೆ.

ಗಾಯದ ಪ್ರಮಾಣಪತ್ರ ಸಲ್ಲಿಸಿದರೆ ಅನುಕೂಲವಾಗುತ್ತದೆ ಎಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಘಟನೆ ಆದ ಮನೆಯ ಮುಂದೆ ಪಶುವೈದ್ಯಕೀಯ ಚಿಕಿತ್ಸಾಲಯ ಇದೆ ಎಂದರೆ ಸಾಕ್ಷಿ ಪಕ್ಕದಲ್ಲಿ ಇದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಪಕ್ಕದಲ್ಲಿ ಬಸವಣ್ಣರವರ ಗದ್ದುಗೆ ಇದೆ ಎಂದರೆ ಸರಿ. ಬಸವಣ್ಣರವರ ಗದ್ದುಗೆ ನನ್ನ ಮನೆಗೆ ಅಡ್ಡ ಬರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ಘಟನೆ ನಡೆಯುವಾಗ ಸೂರ್ಯ ಮುಳುಗುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 10.30 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ದಿಃ 08.05.2016 ಎಂದು ಗಾಯದ ಪ್ರಮಾಣಪತ್ರದಲ್ಲಿ ನಮೂದು ಇದೆ ಹಾಗೂ ದೂರನ್ನು ದಿಃ 10.05.2016 ರಂದು ನೀಡಲಾಗಿದೆ ಎಂದರೆ ಸಾಕ್ಷಿಯು ದಿಃ 08.05.2016 ರಂದು ಘಟನೆ ಜರುಗಿದ್ದು ಆದ್ದರಿಂದ ಅದರ ದಿನಾಂಕ ನಮೂದಿಸಿದ್ದಾರೆ ಎಂದು ನುಡಿಯುತ್ತಾರೆ. ವಂಶವೃಕ್ಷದ ಆಧಾರದ ಮೇಲೆ ಆರೋಪಿತರ ಹೆಸರುಗಳನ್ನು ನೀಡಿದ್ದೇವೆ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.